ಮಾಡಿದ್ರೂ ಇಲ್ಲ. ಅವನ ಫ್ರೆಂಡ್ಸಿಗೆ ಕಾಲ್ ಮಾಡಿದ್ರೆ ಅವ ಆಗ್ಲೇ ಕಂಪೆನಿ ಬಿಟ್ಟು ಅಮೇರಿಕಾಕ್ಕೆ ಹೋಗಿದ್ದಾನೆ ಅಂತ ಸುದ್ದಿ ಕೊಟ್ರು. ಕೈಕಾಲು ತಣ್ಣಗಾಯ್ತು ಅವಳಿಗೆ. ಹೇಗೆ ಹೇಗೆ ಟ್ರೈ ಮಾಡಿದ್ರೂ ಅವ ಅಮೆರಿಕಾದಲ್ಲಿ ಎಲ್ಲಿ ಇದ್ದಾನೆ ಅಂತ ಪತ್ತೆ ಹಚ್ಲಿಕ್ಕೆ ಸಾಧ್ಯ ಆಗ್ಲೇ ಇಲ್ಲ. ಕಡೆಗೆ ಅತ್ತೆ ಮನೆಗೆ ಹೋಗಿ ಒಂದಿಷ್ಟು ಜಗಳ ಆಡಿದ ಮೇಲೆ ಅವನ ನಂಬರ್, ಅಡ್ರೆಸ್ ಎಲ್ಲ ಸಿಕ್ಕಿತು. ಒಂದು ಕಡೆ ಮಗ ಅಪ್ಪ ಎಲ್ಲಿ? ಅಂತ ಕೇಳ್ತಾ ಇದ್ರೆ ಮತ್ತೊಂದು ಕಡೆ ತವರು ಮನೆಯಲ್ಲಿ ಹೆಚ್ಚು ದಿನ ಇರ್ಲಿಕ್ಕೆ ಆಗದ ಸ್ಥಿತಿ. ಅಂತೂ ಇಂತೂ ಯಾರ್‍ಯಾರನ್ನೋ ಕಾಡಿ ಬೇಡಿ ತಾನು ಕೂಡ ಅಮೆರಿಕಾಕ್ಕೆ ಹೋದ್ಲು. ಅಲ್ಲಿ ಅವನೊಟ್ಟಿಗೆ ಹೊಂದಿಕೊಂಡು ಇರ್ಲಿಕ್ಕೆ ಆಗ್ತದಾ ಅಂತ ನೋಡ್ಲಿಕ್ಕೆ ಟ್ರೈ ಮಾಡಿದ್ಲು. ಅವ ಎಲ್ಲಿಯೋ ಒಂದು ರೀತಿಯಿಂದ ಮೃದು ಆದವನ ಹಾಗೆ ಕಂಡ. ಒಂದು ದಿನ ಹೊರಗಡೆ ಸುತ್ತಾಡುವ ಅಂತ ಕರ್ಕೊಂಡು ಹೋದವ ಎಲ್ಲಿಯೋ ಒಂದು ಶಾಪಿಂಗ್ ಮಾಲಿನಿಂದ ಹಾಗೆಯೇ ಪರಾರಿ! ಅಲ್ಲಿ ಇಲ್ಲಿ ಹುಡುಕಾಡಿದ್ರೂ ಅವ ಸಿಗ್ಲಿಲ್ಲ. ಮೊಬೈಲಿಗೆ ಟ್ರೈ ಮಾಡಿದ್ರೆ ಇಲ್ಲ. ಅಂತೂ ಇಂತೂ ಮಗನನ್ನು ಕರ್ಕೊಂಡು ಮನೆಗೆ ಬಂದ್ರೆ ಮನೆ ಬೀಗ. ಯಾರ್‍ಯಾರದ್ದೋ ಸಹಾಯ ಪಡ್ಕೊಂಡು ಕೊನೆಗೆ ಮನೆಯ ಒಳಗೆ ಹೋದ್ಲು. ಕೆಲ ಹೊತ್ತಿನ ನಂತ್ರ ಅವ ಕಾಲ್ ಮಾಡಿ ಹೇಳಿದ– 'ನೀನು ಇನ್ನು ನನ್ನನ್ನು ಹುಡುಕುದು ಬೇಡ, ನಾನು ಇಲ್ಲಿ ಒಬ್ಳನ್ನು ಕಟ್ಟಿಕೊಂಡಿದ್ದೇನೆ. ಅವಳು ನಿನ್ನ ಹಾಗೆ ಗೊಡ್ಡಲ್ಲ ತಿಳ್ಕೋ. ನಂಗೆ ನನ್ನದೇ ಆದ ಮಗು ಬೇಕು. ಎಲ್ಲೆಲ್ಲಿದ್ದಾ ಯಾವ್ದೋ ಜಾತಿದ್ದಾ ಮಗುವನ್ನು ನಾನು ನನ್ನ ಮಗು ಅಂತ ಒಪ್ಪಿಕೊಳ್ಳೂದಿಲ್ಲ ತಿಳ್ಕೋ' ಅಂತ ಬೊಬ್ಬೆ ಹೊಡ್ದ.

ಯೂ ರ್‍ಯಾಸ್ಕಲ್...! ಎಲ್ಲಿಯೋ ಅಡಗಿ ಕೂತು ನನ್ನನ್ನು ವಂಚಿಸ್ತಾ ಇದ್ದೀಯಾ? ಬೇಕು ಅಂತಾದಾಗ ಹತ್ತಿರ ಸೇರಿಸ್ಲಿಕ್ಕೆ ಬೇಡ ಅಂತಾದಾಗ ದೂರ ಮಾಡ್ಲಿಕ್ಕೆ ನಾನೇನೂ ನೀನು ಇಟ್ಟ ಆಳಲ್ಲ ತಿಳ್ಕೋ' ಅಂತ ಇವಳು ಸಾ ಬೊಬ್ಬೆ ಹೊಡೆದಳು. ಪ್ರತೀ ಸರ್ತಿ ನಂಬುದು ಮೋಸ ಹೋಗುದು ಇಂತ ಸ್ಥಿತಿಯಿಂದ ಅವಳು ಕಂಗಾಲು ಆಗಿದ್ದಳು. ಅಂತೂ ಇಂತೂ ಊರಿಗೆ ಬಂದ್ಲು.

ಊರಿಗೆ ಬಂದ ಬೆನ್ನಿಗೇ ಅವಳಿಗೆ ಒಂದು ಶಾಕ್ ಕಾದಿತ್ತು. ನಂದಕುಮಾರ ಡೈವೋರ್ಸ್ ನೋಟೀಸ್ ಕಳಿಸಿದ್ದ. ಸೀದ ಅದನ್ನು ಹಿಡ್ಕೊಂಡು ಅತ್ತೆ ಮನೆಗೆ ಹೋದ್ಲು. 'ಅತ್ತೆ....ಯೆಂಥದಿದು?' ಅಂತ ಕೇಳಿದ್ಲು..


'ನನ್ನ ಹತ್ರ ಯೆಂತ ಕೇಳುದು? ಡೈವೋರ್ಸ್ ನೋಟೀಸ್ ಕಳಿಸಿದ್ದು ಅವ. ನನ್ನ ಹತ್ರ ಕೇಳುದು ಯೆಂತಕ್ಕೆ? ಹೋಗಿ ಅವನ ಹತ್ರ ಕೇಳು' ಅಂತ ಮುಖಕ್ಕೆ ಹೊಡ್ದ ಹಾಗೆ ಹೇಳಿದ್ರು.

'ಅವ ಡೈವೋರ್ಸ್ ನೋಟೀಸ್ ಕಳಿಸಿಕೊಡ್ಲಿಕ್ಕೆ ನೀವೇ ಕಾರಣ. ನಿಮ್ಮ ಪುಕಾರು ಇಲ್ಲದೇ ಇದ್ರೆ ಅವ ಹಾಗೆ ಮಾಡ್ಲಿಕ್ಕೆ ಸಾಧ್ಯ ಇಲ್ಲ' ಗರ್ವದಿಂದ ಚೀರಿದಳು.

'ಹೌದು ನಾನೇ ಹೇಳಿದ್ದು ಅನ್ನಿಗೆ ನೀನು ಯೆಂತ ಮಾಡ್ತೀ? ಅವನಿಗೆ ನೀನು ದತ್ತು ತೆಕ್ಕೊಂಡ ಆ ಕರಿ ಮಗು, ಹೆರ್ಲಿಕ್ಕಾಗದ ನೀನು ಎಲ್ಲ ಒಂದು ರೀತಿಯಲ್ಲಿ ಹೇಸಿಗೆ ತರಿಸಿದ್ದೀರಿ. ಪಾಪ ಅವ ಆದ್ರೂ ಯೆಂತ ಮಾಡ್ತಾನೆ? ಉಪ್ಪು ಹುಳಿ ಖಾರ ತಿನ್ನುವ ಜೀವ ಅವನದ್ದು. ಅವನಿಗೂ ಸುಖ ಬೇಕು ಅಂತ ಅನಿಸೂದಿಲ್ವಾ? ಅದಕ್ಕೇ ನಾನೇ ಹೇಳಿದ್ದು ನಿಂಗೆ ಡೈವೋರ್ಸ್ ಕೊಡೂ ಅಂತ. ಅದಕ್ಕೇ ನೋಟೀಸ್ ಕಳಿಸಿದ್ದಾನೆ ನಿಂಗೆ' ಅಂತ ಹೇಳಿದವರೇ ರಪ್ ಅಂತ ಬಾಗಿಲು ಹಾಕಿದ್ರು.

ಒಂದು ಕ್ಷಣ ತಲೆ ತಿರುಗಿದ ಹಾಗಾದ್ರೂ ಅವಳು ಧೈರ್ಯ ಕಳೆದುಕೊಳ್ಳಲಿಲ್ಲ. ಈ ಸರ್ತಿ ಒಂದು ಗತಿ ಕಾಣಿಸ್ಲೇ ಬೇಕು ಅಂತ ನಿರ್ಧಾರ ಮಾಡಿದ್ಲು. ಊರಿಗೆ ಬಂದು ಅಮ್ಮನ ಮನೆ ಹೊಕ್ಕಿಕೊಂಡಳು. ಮಗನನ್ನು ಅಲ್ಲಿಯೇ ಶಾಲೆಗೆ ಸೇರಿಸಿದ್ಲು. ಅದೇ ಶಾಲೆಯಲ್ಲಿ ಟೀಚರ್ ಕೆಲಸ ಸಾ ಸಿಕ್ಕಿತು. ಲಾಯರ್ ಭೇಟಿ ಮಾಡಿದ್ಲು. 'ನೀವು ಒಪ್ಪಿಗೆ ಕೊಡದೇ ಇದ್ರೆ ಡೈವೋರ್ಸ್ ಸಿಗೂದಿಲ್ಲ. ನೀವು ಬಿಗಿಯಾಗಿ ನಿಂತ್ರೆ ಏನು ಸಾ ಮಾಡ್ಲಿಕ್ಕೆ ಆಗೂದಿಲ್ಲ' ಅಂತ ಹೇಳಿದ್ರು.

ಇಷ್ಟೆಲ್ಲ ಆಗುವಾಗ ಎರಡು ವರ್ಷ ಕಳೀತು. ನಂದಕುಮಾರ ಅಮೆರಿಕಾದಲ್ಲಿ ಸಾ ಕೆಲಸ ಕಳ್ಕೊಂಡ. ವೀಸಾ ಪ್ರಾಬ್ಲಂನಿಂದ ಊರಿಗೆ ಬರ್ಬೇಕಾಯ್ತು. ಒಂದು ಕಡೆ ಕೋರ್ಟ್‌ನ ಅಲೆದಾಟ. ಮತ್ತೊಂದು ಕಡೆ ಕೆಲಸದ ಹುಡುಕಾಟ. ಇದರಲ್ಲಿ ಹೈರಾಣಾಗಿ ಹೋದ. ಇದೇ ಸಮಯಕ್ಕೆ ಅವಳು 'ನಾನು ಡೈವೋರ್ಸ್‌ಗೆ ಸೈನ್ ಹಾಕ್ತೇನೆ. ನಂಗೆ ತಿಂಗಳಿಗೆ ಒಂದೂವರೆಯಿಂದ ಎರಡು ಲಕ್ಷ ಜೀವನಾಂಶ ಕೊಡ್ಬೇಕು. ಇಲ್ಲಾಂತಾದ್ರೆ ಬಿಡೂದಿಲ್ಲ' ಅಂತ ತನ್ನ ವಕೀಲನ ಮೂಲಕ ಹೇಳಿ ಕಳಿಸಿದ್ಲು. ಇದ್ರಿಂದ ಅವ ನಡುಗಿ ಹೋದ. ಕೇಸು ಎರಡು ವರ್ಷ ಎಳ್ದಾಗ ಪದೇ ಪದೇ ರಾಜಿಯ ಮಾತಾಡ್ಲಿಕ್ಕೆ ಸುರು ಮಾಡಿದ್ದ. ಹೇಸಿಗೆಯಾಗಿ ಡೈವೊರ್ಸೇ ಬೇಕು ಅಂತ ಪಟ್ಟು ಹಿಡಿದಳು ಜಡ್ಜಿನ ಮುಂದೆ. ಎಲ್ಲ ಹಂತದಲ್ಲಿ ವಿಚಾರಣೆ ಆದ ನಂತ್ರ ತೀರ್ಪು ಕೊಡುವ ಹಂತಕ್ಕೆ ಅವರು ಬಂದಿದ್ರು. ಸೋಮವಾರ ಡೈವೋರ್ಸ್ ಕೊಡ್ಬಹುದು ಅಂತ ತೀರ್ಮಾನದ ಧಾಟಿಯಲ್ಲಿ ಮಾತಾಡಿದ್ರು.




## ಯಾರಿಗೆ

ಆಸ್ತಿ–ಪಾಸ್ತಿ
ಪಾಲು
ಮಾಡುವಾಗ
ಬಹಳ
ಗದ್ದಲವಾಯಿತು.
'ನಾನು
ಯಾರ ಪಾಲಿಗೆ..?'
ಅಮ್ಮ
ಕೇಳಿದಾಗ
ಗದ್ದಲ
ಮೌನವಾಯಿತು.

**–ತೈರೊಳ್ಳಿ ಮಂಜುನಾಥ ಉಡುಪ**

ಅದ್ರ ಎರಡು ದಿನದ ಹಿಂದೆ ಮಧ್ಯಾಹ್ನ ಅವ ಇಷ್ಟೆಲ್ಲ ಕಾಲ್, ಮೆಸೇಜ್ ಎಲ್ಲ ಮಾಡಿದ್ದು. ಸಂಜೆಯಾಗಿತ್ತು. ಅನಸೂಯಮ್ಮ ದೇವಸ್ಥಾನದಿಂದ ವಾಪಾಸ್ ಬಂದಿದ್ರು. 'ಎಂತ ಡಿಸೈಡ್ ಮಾಡಿದಿ ಮಗಾ?' ಅಂತ ಕೇಳಿದ್ರು. ಎಂತ ಡಿಸೈಡ್ ಮಾಡುದು? ಏನು ಮಾಡ್ಬೇಕಾ ಅದೇ ಮಾಡ್ತೇನೆ. ಸೋಮವಾರ ನೀನು ಸಾ ಕೋಟರ್ಟ್‌ಗೆ ಬಾ ತೋರಿಸ್ತೇನೆ ಅಲ್ಲಿ ಏನಾಗ್ತದೆ ನೋಡು.' ಅಂತ ಹೇಳಿದವಳು ಹೊರಗೆ ಹೋದ್ಲು.

ಆವತ್ತು ಸೋಮವಾರ. ಕೋರ್ಟ್‌ಗೆ ತನ್ನ ಅಮ್ಮ ಹಾಗೂ ಮಗನ ಒಟ್ಟಿಗೆ ಬಂದ್ಲು. ಜಡ್ಜ್ ಸಾಹೇಬರು ಹನ್ನೊಂದು ಗಂಟೆಯ ಹೊತ್ತಿಗೆ ಬಂದ್ರು. 'ಏನಮ್ಮಾ ನಿಮಿಗೆ ಡೈವೋರ್ಸ್ ಬೇಕಾ?' ಅಂತ ಕೇಳಿದ್ರು. ಹೌದು ಅಂತ ಅವಳು ಹೇಳಿದ್ಲು. 'ಮತ್ತೆ ನಿನ್ನ ಗಂಡ ಕೇಸ್ ವಾಪಾಸ್ ತೆಕ್ಕೊಳ್ತೇನೆ. ನಂಗೆ ಡೈವೋರ್ಸ್ ಬೇಡ ಅಂತ ಹೇಳ್ತಾನಲ್ಲ?' ಅಂತ ಕೇಳಿದ್ರು. 'ನೋಡಿ ಸಾರ್ ಕಳ್ದ ಕೆಲವು ವರ್ಷಗಳಿಂದ ಇವನ ನಡವಳಿಕೆ ನಂಗೆ ರೋಸಿ ಹೋಗಿದೆ. ಇನ್ನು ಮೇಲಾದ್ರೂ ನಂಗೆ ನೆಮ್ಮದಿ ಬೇಕು. ನಂಗೆ ಖಾಯಂ ಉದ್ಯೋಗ ಇಲ್ಲ. ಜೀವನಾಂಶ ಕನಿಷ್ಠ ಒಂದು ಲಕ್ಷ ಆದ್ರೂ ಬೇಕು' ಅಂತ ಕೇಳಿದ್ಲು. ಜಡ್ಜ್ ಸಾಹೇಬರು ಕೊನೆಯಲ್ಲಿ ತಿಂಗಳಿಗೆ ಎಪ್ಪತ್ತೈದು ಸಾವಿರ ಪರಿಹಾರ ಕೊಡುವಂತೆ ಹೇಳಿ ಡೈವೋರ್ಸ್ ಕೊಟ್ರು. ನೆಮ್ಮದಿಯಿಂದ ಅವಳು ಅಮ್ಮ ಹಾಗೂ ಮಗನ ಒಟ್ಟಿಗೆ ಹೊರಗೆ ಬಂದ್ಲು. ಅವನೂ ಎಂಥದೋ ಹೇಳ್ಲಿಕ್ಕೆ ಅಂತ ಬೆನ್ನ ಹಿಂದೆಯೇ ಓಡಿ ಬಂದ. ಅವಳೊಮ್ಮೆ ನೋಡಿದ್ಲು.

'ಈಗ ಬಿಡುಗಡೆ ಸಿಕ್ಕಿತು ನಂಗೆ. ಈ ಮಗುವನ್ನು ದತ್ತು ತೆಕ್ಕೊಂಡದ್ದಕ್ಕೆ ನೀನು ನನ್ನನ್ನು ಹೀನಾಯವಾಗಿ ಕಂಡಿ ಅಲ್ವಾ? ನಿಂಗೆ ಇನ್ನೊಂದು ಮಾತು ಹೇಳ್ತೇನೆ ಕೇಳು... ನಾನು ಮುಂದಿನ ವಾರ ಒಂದು ಹೆಣ್ಣು ಮಗುವನ್ನು ಅನಾಥಾಶ್ರಮದಿಂದ ದತ್ತು ತೆಕ್ಕೊಂಡು ಬರ್ತೇನೆ. ಅದೂ ಕೂಡ ನೀನು ನಿನ್ನ ಕಡೆಯವ್ರೆಲ್ಲ ಶೀ ವ್ಯಾಕ್ ಅಂತ ಹೇಳ್ತಾ ಇದ್ದ ಕಪ್ಪು ಬಣ್ಣದ್ದೇ. ಈ ಅಣ್ಣನಿಗೆ ಒಂದು ತಂಗಿ ಸಿಗ್ತಾಳೆ. ನೆಮ್ಮದಿಯಿಂದ ಬದುಕುತ್ತೇನೆ. ನೋಡ್ತಾ ಇರು' ಅಂತ ಹೇಳಿದವಳೇ ಆಟೋ ರಿಕ್ಷಾ ಹತ್ತಿಕೊಂಡು ಹೊರಟೇ ಹೋದ್ಲು. ಅವ ನೋಡ್ತಾ ನಿಂತಿದ್ದ.